**O.S .No. 79/2020 4 PW -1**

**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ06-07-2023**

ಮುಂದುವರೆದ ಪಾಟೀ ಸವಾಲುಃ ಶ್ರೀ ಎ ಪಿ ಎಂ ವಕೀಲರಿಂದ

ನನ್ನ ತಾಯಿ ಹೆಸರು ಜಯಮ್ಮ, ನನ್ನ ಚಿಕ್ಕಮ್ಮನ ಹೆಸರು ಪುಟ್ಟಮ್ಮ. ನನ್ನ ಚಿಕ್ಕಮ್ಮನಿಗೆ ಮತ್ತೊಂದು ಹೆಸರು ಜಯಮ್ಮ ಎಂದು ಇರುವುದಿಲ್ಲ. ನನ್ನ ತಾಯಿ ಮತ್ತು ಚಿಕ್ಕಮ್ಮನಿಗೆ **5** ರಿಂದ **6** ವರ್ಷಗಳ ವ್ಯತ್ಯಾಸ ಇರುತ್ತದೆ.

ನನ್ನ ತಾಯಿಯ ತಂದೆಗೆ ಐದು ಜನ ಮಕ್ಕಳು. ಅವರೆಂದರೆ ಭೈರಪ್ಪ, ಜಯಮ್ಮ, ಗಣೇಶ, ಪಾರ್ವತಿ, ಪುಟ್ಟಮ್ಮ. ನನ್ನ ತಂದೆಯ ತಂದೆಗೆ ಇಬ್ಬರು ಮಕ್ಕಳು, ಅವರೆಂದರೆ ಹೆಚ್ ಟಿ ರಾಜು ಮತ್ತು ಹೆಚ್ ಟಿ ರಘು. ನನ್ನ ತಂದೆಯ ತಂದೆ ತಾಯಿ ಇಬ್ಬರೂ ಜೀವಂತ ಇರುವುದಿಲ್ಲ. ಅವರು ಪೌತಿಯಾಗಿ ಎಷ್ಟು ವರ್ಷಗಳಾದವು ಎಂದು ನನಗೆ ಗೊತ್ತಿಲ್ಲ. ಹೆಚ್ ಟಿ ರಾಜು ಮತ್ತು ಹೆಚ್ ಟಿ ರಘು ರವರ ನಡುವೆ ಆಸ್ತಿಗಳು ವಿಭಜನೆ ಆಗಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಈಗಲೂ ಹೆಚ್ ಟಿ ರಾಜು ಮತ್ತು ಹೆಚ್ ಟಿ ರಘು ರವರ ಹೆಸರಿನಲ್ಲಿ ಜಂಟಿ ಖಾತೆ ಇದೆ ಎಂದರೆ ಸರಿ. ಅವರ ನಡುವೆ ವಿಭಾಗ ಆಗದೇ ಇರುವ ಕಾರಣ ಹೆಚ್ ಟಿ ರಘುರವರನ್ನು ಪಕ್ಷಗಾರರನ್ನಾಗಿ ಮಾಡಬೇಕಾಗುತ್ತದೆ ಎಂದರೆ ಸಾಕ್ಷಿದಾರರು ನನ್ನ ತಂದೆಯವರ ಭಾಗದ ಹಿಸ್ಸೆಯನ್ನು ಕೇಳಿ ದಾವಾ ದಾಖಲು ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ನನಗೆ ಮದುವೆಯಾಗಿದ್ದು ನನ್ನ ಹೆಂಡತಿ ಹೆಸರು ಜ್ಯೋತಿ, ಮಗನ ಹೆಸರು ಶ್ರೀರಾಮ್. ನನ್ನ ಮೊದಲ ಹೆಂಡತಿ ಹೆಸರು ಕವಿತಾ. ನನ್ನ ಮತ್ತು ಕವಿತಾಳ ನಡುವೆ ವಿಚ್ಛೇದನ ಆಗಿರುತ್ತದೆ ಎಂದರೆ ಸರಿ. ನನ್ನ ಮೊದಲನೆ ಹೆಂಡತಿಗೆ ಒಂದು ಹೆಣ್ಣು ಮಗು ಇದ್ದು, ಆಕೆಯ ಹೆಸರು ಅಂಕಿತಾ. ನನ್ನ ತಾಯಿ ಪುಟ್ಟೇಗೌಡರ ಜೊತೆ ಎರಡು ವರ್ಷಗಳ ಕಾಲ ಜೊತೆಯಲ್ಲಿದ್ದರು. ನಂತರ ಅವರು

ಜೊತೆಯಲ್ಲಿ ಇರಲಿಲ್ಲ. ನನ್ನ ತಾಯಿ ನನ್ನ ತಂದೆ ವಿರುದ್ಧ ಯಾವುದೇ ಕೇಸನ್ನು ಹಾಕಿರುವುದಿಲ್ಲ. ನಂತರ ನನ್ನ ತಾಯಿ ಬೇರೆ ಮದುವೆ ಆಗಿರುವುದಿಲ್ಲ.

ನನ್ನ ತಾಯಿಗೆ ನಾನು ಒಬ್ಬನೇ ಮಗ. ಹೆಚ್ ಟಿ ರಾಜು ಒಕ್ಕಲಿಗ ಸಮುದಾಯಕ್ಕೆ ಸೇರಿದವರು ಎಂದರೆ ಸರಿ. ನಮ್ಮ ತಾಯಿ ಕಲ್ಲುಮಠದಲ್ಲಿ 3-4 ವರ್ಷಗಳ ಕಾಲ ವಾಸ ಇದ್ದರು. ನಿಪಿ-10 ಒಪ್ಪಿಗೆ ಪತ್ರ ವಕೀಲರಾದ ಅಕ್ರಂ ಪಾಷಾರವರ ಕಛೇರಿಯಲ್ಲಿ ಮಾಡಿರುತ್ತೇವೆ. ಹಾನುಬಾಳು ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನನ್ನ ಮತ್ತು ನನ್ನ ಹೆಂಡತಿ ಹೆಸರು ಇದೆ ಎಂದರೆ ಸರಿ. ಸಾಕ್ಷಿದಾರರು ಅದನ್ನು ಒಪ್ಪಿದ ಕಾರಣ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನನ್ನ ಹೆಸರಿನ ಭಾಗವನ್ನು ನಿಡಿ-1 ಎ, ನನ್ನ ಹೆಂಡತಿಯ ಹೆಸರಿನ ಭಾಗವನ್ನು ನಿಡಿ-1 ಬಿ ಎಂದು ಗುರುತಿಸಲಾಯಿತು. ನಿಡಿ-1 ಮತದಾರರ ಪಟ್ಟಿಯಲ್ಲಿ ನನ್ನ ತಾಯಿಯ ಹೆಸರಿನ ಪಕ್ಕ ಲೇಟ್ ಪುಟ್ಟೇಗೌಡ ಎಂದು ನಮೂದಾಗಿದೆ ಎಂದರೆ ಸಾಕ್ಷಿದಾರರು ಇದೆ ಆದರೆ ಅದು ತಪ್ಪಾಗಿ ನಮೂದಾಗಿದೆ ಎಂದು ನುಡಿಯುತ್ತಾರೆ. ಅದೇ ಮತದಾರರ ಪಟ್ಟಿಯಲ್ಲಿ ನನ್ನ ತಾಯಿ ಹೆಸರು ಜಯಮ್ಮ ಃಉಃ ಪುಟ್ಟಮ್ಮ ಎಂದು ನಮೂದು ಇದೆ ಎಂದರೆ ಸಾಕ್ಷಿದಾರರು ಅದು ನನ್ನ ಚಿಕ್ಕಮ್ಮನ ಹೆಸರು ಎಂದು ನುಡಿಯುತ್ತಾರೆ.

ಸಾಕ್ಷಿದಾರರು ಪ್ರತಿವಾದಿಯಾದ ಹೆಚ್ ಟಿ ರಾಜುರವರ ವಂಶವೃಕ್ಷ ದೃಢೀಕೃತ ಪತ್ರವನ್ನು ನೋಡಿ ಅದನ್ನು ಒಪ್ಪಿದ ಕಾರಣ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿದಾರರಿಗೆ ಅವರ ಕುಟುಂಬದ ಪಡಿತರ ಚೀಟಿಯನ್ನು ತೋರಿಸಿದ್ದು ಅದನ್ನು ಅವರು ಒಪ್ಪಿದ ಮೇರೆಗೆ ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ನಿಡಿ-3 ಪಡಿತರ ಚೀಟಿಯಲ್ಲಿ ನನ್ನ ತಾಯಿಯ ಗಂಡನ ಹೆಸರು ಪುಟ್ಟೇಗೌಡ ಎಂದು ಮಾತ್ರ ಇದೆ ಎಂದರೆ ಸರಿ. ನಿಡಿ-3 ರಲ್ಲಿಯೂ ಪುಟ್ಟೇಗೌಡ ಎಂದು

ಇದೆ ಎಂದರೆ ಸರಿ. ನನ್ನ ಚಿಕ್ಕಮ್ಮ ಪುಟ್ಟಮ್ಮ ರವರ ಗಂಡನ ಹೆಸರು ಗೊತ್ತಿಲ್ಲ. ನನ್ನ ಚಿಕ್ಕಮ್ಮ ನಮ್ಮ ಮನೆ ಹತ್ತಿರ ವಾಸ ಇದ್ದಾರೆ ಎಂದರೆ ಸರಿ. ಮೊದಲಿಗೆ ನನ್ನ ಚಿಕ್ಕಮ್ಮ ಬಿಳಿಸಾಲೆ ಗ್ರಾಮದಲ್ಲಿ ವಾಸ ಇದ್ದರು, ಇತ್ತೀಚೆಗೆ ಹಾನುಬಾಳಿನಲ್ಲಿ ವಾಸ ಇದ್ದಾರೆ. ಅವರು ಹಾನುಬಾಳಿನಲ್ಲಿ ಕಳೆದ **15** ವರ್ಷಗಳಿಂದ ವಾಸ ಇದ್ದಾರೆ. ನಾನು ಚಿಕ್ಕವನಾಗಿದ್ದಾಗಿನಿಂದಲೂ ನಾನು ಹಾನುಬಾಳಿನಲ್ಲಿ ವಾಸ ಇದ್ದೆನು ಎಂದರೆ ಸರಿಯಲ್ಲ. ನನ್ನ ಚಿಕ್ಕಮ್ಮನಿಗೆ ಒಬ್ಬ ಮಗ ಹರೀಶ್ ಇದ್ದು ಆತನಿಗೆ **22** ವರ್ಷ ವಯಸ್ಸು. ನನ್ನ ಚಿಕ್ಕಮ್ಮನ ಆಧಾರ್ ಕಾರ್ಡ್ ನಲ್ಲಿ ಗಂಡನ ಹೆಸರು ಏನು ಇದೆ ಎಂದು ನನಗೆ ಗೊತ್ತಿಲ್ಲ ಮತ್ತು ಆತನ ಮಗನ ಶಾಲಾ ದಾಖಲಾತಿ, ಆದಾರ್ ಕಾರ್ಡ್ ನಲ್ಲಿ ತಂದೆ ಹೆಸರು ಏನು ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ಚಿಕ್ಕಮ್ಮನ ಗಂಡ ಬದುಕಿದ್ದಾರೋ ಇಲ್ಲವೋ ಗೊತ್ತಿಲ್ಲ.

ಸಾಕ್ಷಿದಾರರಿಗೆ ಅವರ ಚಿಕ್ಕಮ್ಮ ಪುಟ್ಟಮ್ಮ ನವರ ಕುಟುಂಬದ ಪಡಿತರ ಚೀಟಿ ತೋರಿಸಿದ್ದು ಅವರು ಒಪ್ಪಿದ ಮೇರೆಗೆ ಅದನ್ನು ನಿಡಿ**-4** ಎಂದು ಗುರುತಿಸಲಾಯಿತು. ನಿಡಿ**-4** ರಲ್ಲಿ ನನ್ನ ಚಿಕ್ಕಮ್ಮನ ಹೆಸರು ಪುಟ್ಟಮ್ಮ ಎಂದು ಮಾತ್ರ ಇದ್ದು ಜಯಮ್ಮ ಎಂದು ಇರುವುದಿಲ್ಲ ಎಂದರೆ ಸರಿ. ನಿಡಿ**-4** ರಲ್ಲಿ ನಿಮ್ಮ ಚಿಕ್ಕಮ್ಮನ ಗಂಡನ ಹೆಸರು ಕೃಷ್ಣ ಎಂದು ಇದೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯ ಗುರುತಿನ ಬಗ್ಗೆ ನನ್ನ ಶಾಲಾ ದಾಖಲಾತಿಗಳು ಮತ್ತು ನನ್ನ ತಾಯಿ ಆದಾರ್ ಕಾರ್ಡ್ ನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ.

ನಾನು ಬಿಳಿಸಾಲೆ ಗ್ರಾಮದ ಹೆಚ್ ಟಿ ರಾಜು ರವರ ಮಗ ಅಲ್ಲ ಎಂದರೆ ಸರಿಯಲ್ಲ. ನಾನು ಅಥವಾ ನನ್ನ ತಾಯಿ ಹೆಚ್ ಟಿ ರಾಜುರವರ ಕುಟುಂಬದ ಸದಸ್ಯರಲ್ಲ ಎಂದರೆ ಸರಿಯಲ್ಲ.

ನಿಪಿ-**10** ರಂತೆ ಹೆಚ್ ಟಿ ರಾಜು ಯಾವುದೇ ಒಪ್ಪಿಗೆ ಪತ್ರ ಬರೆದುಕೊಟ್ಟಿಲ್ಲ, ಈ ದಾವಾಕ್ಕಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದೇ ಇದ್ದರೂ ಅಕ್ರಮ ಲಾಭ ಹೊಂದುವ ಉದ್ದೇಶದಿಂದ ಸುಳ್ಳು ದಾವಾ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವಾದಪತ್ರದ ಶಿರೋನಾಮೆಯದಲ್ಲಿ ಹೆಚ್ ಟಿ ರಾಜು ಃಉಃ ಪುಟ್ಟೇಗೌಡ ಎಂದು ಬೇಕೆಂದೇ ತಪ್ಪಾಗಿ ನಮೂದು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಹೆಚ್ ಟಿ ರಾಜುರವರಿಗೆ ಪುಟ್ಟೇಗೌಡ ಎಂಬ ಮತ್ತೊಂದು ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-**6** ರಂತೆ ನಾನು ಹೆಚ್ ಟಿ ರಾಜುರವರಿಗೆ ನೋಟೀಸ್ ನೀಡಿದ್ದು, ಅದು ಅವರಿಗೆ ಸಂಬಂಧಿಸದ ಕಾರಣ ಅವರು ಉತ್ತರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಒಪ್ಪಿಗೆ ಪತ್ರವನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ. ಸುಳ್ಳು ಅಂಶಗಳನ್ನು ಸೇರಿಸಿ ಸುಳ್ಳು ದಾವಾ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೆಚ್ ಟಿ ರಾಜು ರವರ ಮಗನಲ್ಲದ ಕಾರಣ ನಾನು ಅವರ ಆಸ್ತಿಯಲ್ಲಿ ಪಾಲು ಕೇಳಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಿವಿಲ್ ನ್ಯಾಯಾಧೀಶರು,
ಸಕಲೇಶಪುರ